

# ಬೆಂಕಿಕಡ್ಡಿಗಳಿಂದ ಕಲಾತ್ಮಕ ಶಿವಲಿಂಗ

ಬೆಂಕಿಕಡ್ಡಿಮಯ ಆಗಿರುವ ಈ ಶಿವಲಿಂಗದ ಪ್ರತಿಮೆಯು ಉಡುಪಿಯ ಮಣಿಪಾಲ ಸನಿಹದ ಪರೀಕಾದಲ್ಲಿರುವ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ಪ್ರಕೃತಿ ಚಿಕಿತ್ಸಾಲಯದಲ್ಲಿದೆ. ಚಿಕಿತ್ಸಾಲಯದ ಒಳ ಪ್ರವೇಶಿಸಿದ ನಂತರ ಕಾಣಸಿಗುವ ಈ ಶಿವಲಿಂಗಕ್ಕೆ ಭಕ್ತಿಯಿಂದ ಕೈ ಮುಗಿಯುತ್ತಲೇ ಕೆಳಗೆ ನಮೂದಿಸಲಾಗಿರುವ, 'ಒಟ್ಟು 16,400 ಬೆಂಕಿಕಡ್ಡಿಗಳಿಂದ ರಚಿಸಲಾಗಿದೆ' ಎಂಬ ಸೂಚನೆ ಗಮನಸೆಳೆಯುತ್ತದೆ. ಆಗ ಸನಿಹ ದೃಷ್ಟಿಯಿಂದ ಆಮೂಲಾಗ್ರವಾಗಿ ಪರಿಶೀಲಿಸಿದಾಗ ಕಲಾ ಸೃಷ್ಟಿಯ ಅದ್ಭುತ ಗೋಚರಕ್ಕೆ ನಿಲುಕುತ್ತದೆ. ಅಷ್ಟೊಂದು ಬೆಂಕಿಕಡ್ಡಿಗಳನ್ನು ಬಳಸಿ ಇದರ ಮೇಲ್ಮೈಯನ್ನು ಅಲಂಕರಿಸಿ ರಚಿಸಲಾಗಿದೆ. ಮೂಲ ಶಿಲಾವಿಗ್ರಹದ ಪೀಠ, ಶಿವಲಿಂಗ, ನಾಗಹೆಡೆಗಳ ಮೇಲೆಲ್ಲಾ ಬೆಂಕಿಕಡ್ಡಿಗಳನ್ನು ಒತ್ತೊತ್ತಾಗಿ ಜೋಡಿಸಿ ನಿರ್ಮಿಸಲಾಗಿದೆ. ಶಿವಲಿಂಗದ ಮೇಲ್ಮೈಗೆ ಕಪ್ಪು ಬಣ್ಣವನ್ನೂ ಪೀಠ ಮತ್ತು ನಾಗಹೆಡೆಗಳಿಗೆ ಹಳದಿ ಬಣ್ಣವನ್ನೂ ಒಪ್ಪುವಂತೆ ಬಳಿದು ಸ್ವಾಭಾವಿಕ ಶಿವಲಿಂಗವೆಂಬಂತೆ ನಿರ್ಮಿಸಲಾಗಿದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ

# ಉದ್ಯಾನ ನಗರದಲ್ಲಿ ಕಬ್ಬಿಣದ ವೀಣೆ



ಕಾರ್ಖಾನೆಯಲ್ಲಿ ಬಳಸುವ ಚಕ್ರಗಳು, ಗೇಟುಗಳಿಗೆ ಬಳಸುವ ಸಣ್ಣ ಪುಟ್ಟ ಆಲಂಕಾರಿಕ ತುಂಡುಗಳು, ಚೂಪು ಕಡ್ಡಿಗಳು, ಸರಪಳಿಗಳು, ಬೈಸಿಕಲ್ ಪೆಡಲ್‌ಗಳು, ನಟ್ಟು ಬೋಲ್ಟುಗಳು ಹೀಗೆ ಕಬ್ಬಿಣದ ನಾನಾ ರೀತಿಯ ಬಿಡಿ ಭಾಗಗಳು ಸುಂದರ ವೀಣೆಯಾಗಿ ಇಲ್ಲಿ ರೂಪುಗೊಂಡಿದೆ. ಸಾವಿರಾರು ಲೆಕ್ಕಕ್ಕೂ ಮೀರಿದ ಕಚ್ಚಾ ವಸ್ತುಗಳನ್ನು ಬಳಸಿ ಅತ್ಯಂತ ನಾಜೂಕಿನಿಂದ ರೂಪಿಸಿದ ಈ ವೀಣೆಯ ಪ್ರತಿಕೃತಿಯು ಕಂಡುಬಂದದ್ದು ಬೆಂಗಳೂರು ದಕ್ಷಿಣ ಭಾಗದ ಬೇಗೂರು ದಾರಿ ಬದಿಯಲ್ಲಿ.

ಈ ಭಾಗದ ಸರ್ ಎಂ. ವಿಶ್ವೇಶ್ವರಯ್ಯ ಮುಖ್ಯ ರಸ್ತೆಯ ಸರ್ಕಲ್‌ನಲ್ಲಿ ಇರುವ ಈ ವೀಣೆಯ ದಾರಿಹೋಕರನ್ನು ಅತ್ಯಾಕರ್ಷಕವಾಗಿ ಸೆಳೆಯುತ್ತಿದೆ. ಈ ವೀಣೆಯ ಉದ್ದ ಸುಮಾರು ಇಪ್ಪತ್ತ ಮೂರು ಅಡಿ ಉದ್ದ ಹಾಗೂ ಹತ್ತು ಅಡಿ ಅಗಲ. ಹಳದಿ ಮಿಶ್ರಿತ ಬಣ್ಣ ಇದರದ್ದು. ಆದರೆ, ಸೂಕ್ತ ನಿರ್ವಹಣೆಯ ಕೊರತೆ ಇಲ್ಲಿ ಎದ್ದು ಕಾಣುತ್ತಿದೆ. ಇದರ ಸುತ್ತಲೂ ಕಬ್ಬಿಣದ ತಂತಿಗಳ ಬೇಲಿ ಹಾಕಿದ್ದರೆ ಬಹುಶಃ ಇನ್ನೂ ಚೆನ್ನಾಗಿ ಇರುತ್ತಿತ್ತು.

–ಆರ್. ವೀರೇಶ್ ಕುಮಾರ್, ಬೆಂಗಳೂರು



# ಬೆಂಕಿ ನಿರೋಧಕ ಮರ

ಅಮೆರಿಕದ 'ಸೆಕ್ವೋಯಾ ಮತ್ತು ಕಿಂಗ್ಸ್ ಕ್ಯಾನ್ಯನ್' ರಾಷ್ಟ್ರೀಯ ಉದ್ಯಾನವನಗಳಲ್ಲಿ ಕಂಡುಬರುವ ಸೆಕ್ವೋಯಾ ಮರಗಳು ಪ್ರಪಂಚದಾದ್ಯಂತ ಪ್ರವಾಸಿಗರನ್ನು ಸೆಳೆಯುತ್ತವೆ. ಸೆಕ್ವೋಯಾಗಳ ಮರ ಮತ್ತು ತೊಗಟೆಯಲ್ಲಿರುವ ಟ್ಯಾನಿನ್ ಎಂಬ ರಾಸಾಯನಿಕವು ಮರ ಜೀವ ಕಳೆದುಕೊಂಡ ಬಳಿಕವೂ ಬೇಗ ಕೊಳೆಯದಂತೆ ನೋಡಿಕೊಳ್ಳುತ್ತದೆ. ಈ ಮರಗಳು ಬೆಂಕಿ ನಿರೋಧಕ ಗುಣದವು. ದಟ್ಟವಾದ ತೊಗಟೆಯನ್ನು ಹೊಂದಿರುವ ಈ ಮರಗಳು ಬೆಂಕಿಗೆ ಪ್ರತಿರೋಧ ಒಡ್ಡುತ್ತವೆ.

ಮರಗಳು ಸತ್ತರೂ ಅವುಗಳ ಕಾಂಡಗಳು ನೂರಾರು ವರ್ಷಗಳ ಕಾಲ ಕಾಡಿನಲ್ಲಿ ಉಳಿಯುತ್ತವೆ. ದೀರ್ಘಕಾಲದವರೆಗೆ ಉಳಿಯುವ ಈ ಮರಗಳನ್ನು ವಿಜ್ಞಾನಿಗಳು ಇಲ್ಲಿನ ಸ್ಥಳೀಯ ಪರಿಸರದ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಂಶೋಧನೆಗೆ ಬಳಸುತ್ತಾರೆ. ಬಿದ್ದ ದೈತ್ಯ ಮರವೊಂದು ಶತಮಾನಕ್ಕೂ ಹಿಂದಿನ ಕಾಲ ಇದ್ದಂತೆಯೇ ಕಾಣುತ್ತಿತ್ತು. ಇಂತಹದ್ದೇ ಮರದ ದೈತ್ಯ ಮರದ ಒಳಭಾಗದ ಟೊಳ್ಳಿನೊಳಗೆ ನಿಂತು ತೆಗೆದ ಚಿತ್ರ ಯಾವುದೋ ಸುರಂಗದೊಳಗೆ ನಿಂತ ಹಾಗೆ ಕಾಣುತ್ತದೆ.

–ಎಸ್. ಪ್ರಭಾವತಿ, ಬೆಂಗಳೂರು